**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1979/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಮೊಹಮ್ಮದ್ ಹಾರಿಫ್ | ಪ್ರಾಸಾ -3 |
| ತಂದೆಯ ಹೆಸರು | : ಹಸನಬ್ಬ | ಚಾಸಾ-4 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ | ದಿನಾಂಕಃ22.10.2024 |
| ವಾಸಸ್ಥಳ | : ಬಣಕಲ್ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ. ಚಾಸಾ-1 ಹಾಗೂ ಮೃತ ಮಂಜುನಾಥ್ ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-5 ರ ಶವತನಿಖಾ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-6 ರ ಭಾವಚಿತ್ರದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಶವತನಿಖಾ ವರದಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ನಾನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದಾಗ ರಾ.12.00 ಗಂಟೆ ಸಮಯಕ್ಕೆ ಪೋಲಿಸರು ನನ್ನ ಸಹಿಯನ್ನು ಪಡೆದು ಶವಗಾರದಲ್ಲಿ ಪೋಟೋ ತೆಗೆದಿರುತ್ತಾರೆ. ಒಂದು ಮೃತ ದೇಹದ ಬಗ್ಗೆ ನನ್ನ ಸಹಿ ಪಡೆದು ಪೋಟೋ ತೆಗೆದಿರುತ್ತಾರೆ. ಮೃತ ದೇಹ ಯಾರದ್ದು ಹಾಗೂ ಅವರು ಹೇಗೆ ಮೃತಪಟ್ಟರು ಎಂದು ನನಗೆ ಮಾಹಿತಿ ಇಲ್ಲ ಹಾಗೂ ಪೋಲಿಸರು ಈ ಬಗ್ಗೆ ಏನನ್ನು ತಿಳಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.12.05.2023 ರಂದು ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಯಲ್ಲಿ ಮೃತ ಮಂಜುನಾಥ್ ರವರ ಮೃತ ದೇಹದ ಪಂಚನಾಮೆ ಕಾಲಕ್ಕೆ ಸ.5.00 ರಿಂದ 6.30 ರ ಸಮಯಕ್ಕೆ ನಿಪಿ-5 ಕ್ಕೆ ಸಹಿ ಮಾಡಿದ್ದು ಅದೇ ಸಮಯಕ್ಕೆ ನಿಪಿ-6 ರ ಪೋಟೊ ತಗೆಯಲಾಗಿದೆ ಎಂದರೆ ಸರಿಯಲ್ಲ. ಸಹಿ ಮಾಡುವ ಕಾಲಕ್ಕೆ ಚಾಸಾ-1 ಮತ್ತು 3 ರವರು ಇದ್ದರು ಎಂದರೆ ಸಾಕ್ಷಿಯು ಚಾಸಾ-3 ರವರು ಮಾತ್ರ ಇದ್ದರು ಎಂದು ನುಡಿಯುತ್ತಾರೆ.

ನನಗೆ ನಿಪಿ-5 ಮತ್ತು 6 ರ ಬಗ್ಗೆ ಸಂಪೂರ್ಣ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1979/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಹಸೈನರ್ | ಪ್ರಾಸಾ -2 |
| ತಂದೆಯ ಹೆಸರು | : ಟಿ.ಕೆ.ಅಬ್ದುಲ್ | ಚಾಸಾ-3 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ22.10.2024 |
| ವಾಸಸ್ಥಳ | : ಬಿಳುಗುಳ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ. ಚಾಸಾ-1 ಹಾಗೂ ಮೃತ ಮಂಜುನಾಥ್ ರವರ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.12.05.2023 ರ ಶವತನಿಖಾ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಒಂದು ಭಾವಚಿತ್ರವನ್ನು ನೋಡಿ ಅದರಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಶವತನಿಖಾ ವರದಿಯನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ), ಫೋಟೋವನ್ನು ನಿಪಿ-6 ಎಂದು ಗುರುತಿಸಲಾಯಿತು.

ನಾನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದಾಗ ರಾ.12.00 ಗಂಟೆ ಸಮಯಕ್ಕೆ ಪೋಲಿಸರು ನನ್ನ ಸಹಿಯನ್ನು ಪಡೆದು ಶವಗಾರದಲ್ಲಿ ಪೋಟೋ ತೆಗೆದಿರುತ್ತಾರೆ. ಒಂದು ಮೃತ ದೇಹದ ಬಗ್ಗೆ ನನ್ನ ಸಹಿ ಪಡೆದು ಪೋಟೋ ತೆಗೆದಿರುತ್ತಾರೆ. ಮೃತ ದೇಹ ಯಾರದ್ದು ಹಾಗೂ ಅವರು ಹೇಗೆ ಮೃತಪಟ್ಟರು ಎಂದು ನನಗೆ ಮಾಹಿತಿ ಇಲ್ಲ ಹಾಗೂ ಪೋಲಿಸರು ಈ ಬಗ್ಗೆ ಏನನ್ನು ತಿಳಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ದಿ.12.05.2023 ರಂದು ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಯಲ್ಲಿ ಮೃತ ಮಂಜುನಾಥ್ ರವರ ಮೃತ ದೇಹದ ಪಂಚನಾಮೆ ಕಾಲಕ್ಕೆ ಸ.5.00 ರಿಂದ 6.30 ರ ಸಮಯಕ್ಕೆ ನಿಪಿ-5 ಕ್ಕೆ ಸಹಿ ಮಾಡಿದ್ದು ಅದೇ ಸಮಯಕ್ಕೆ ನಿಪಿ-6 ರ ಪೋಟೊ ತಗೆಯಲಾಗಿದೆ ಎಂದರೆ ಸರಿಯಲ್ಲ. ಸಹಿ ಮಾಡುವ ಕಾಲಕ್ಕೆ ಚಾಸಾ-1 ಮತ್ತು 4 ರವರು ಇದ್ದರು ಎಂದರೆ ಸಾಕ್ಷಿಯು ಚಾಸಾ-4 ರವರು ಮಾತ್ರ ಇದ್ದರು ಎಂದು ನುಡಿಯುತ್ತಾರೆ.

ನನಗೆ ನಿಪಿ-5 ಮತ್ತು 6 ರ ಬಗ್ಗೆ ಸಂಪೂರ್ಣ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1979/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀಹರಿ | ಪ್ರಾಸಾ -1 |
| ತಂದೆಯ ಹೆಸರು | : ಸತ್ಯನಾರಾಯಣ | ಚಾಸಾ-1 |
| ವಯಸ್ಸು | : 47 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ22.10.2024 |
| ವಾಸಸ್ಥಳ | : ದಾವಣಗೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ. ಮೃತ ಮಂಜುನಾಥ್ ನನ್ನ ತಮ್ಮ. ಚಾಸಾ-2 ರವರು ಮೃತ ಮಂಜುನಾಥ್ ರವರ ಪತ್ನಿ. ಚಾಸಾ-8 ನನ್ನ ತಂಗಿ.

ದಿ.12.05.2023 ರಂದು ಚಾಸಾ-8 ರವರು ನನಗೆ ಕರೆ ಮಾಡಿ ಮಂಜುನಾಥ್ ರವರಿಗೆ ಅಪಘಾತವಾಗಿದೆ ಎಂದು ಬಣಕಲ್ ಪೋಲಿಸರು ಹೇಳಿದರು ಎಂದು ತಿಳಿಸಿದರು. ನಂತರ ನಾನು ದಾವಣಗೆರೆಯಿಂದ ಬಣಕಲ್ ಪೋಲಿಸ್ ಠಾಣೆಗೆ ಬಂದೆ. ಆಗ ಪೊಲಿಸರು ನನ್ನನ್ನು ಮೂಡಿಗೆರೆ ಆಸ್ಪತ್ರೆಯ ಶವಗಾರಕ್ಕೆ ಕರೆದುಕೊಂಡು ಹೋಗಿ ಮೃತ ಮಂಜುನಾಥ್ ರವರ ಮೃತದೇಹವನ್ನು ಗುರುತಿಸುವಂತೆ ತಿಳಿಸಿದರು. KA-21-C-4813 ವಾಹನವು ಮಂಜುನಾಥ್ ರವರಿಗೆ ಅಪಘಾತಪಡಿಸಿದೆ ಎಂದು ನನಗೆ ತಿಳಿಸಿದರು. ಈ ಬಗ್ಗೆ ನಾನು ದೂರು ದಾಖಲಿಸಿದ್ದೇನೆ. ಆದಾದ 5 ದಿನದ ನಂತರ ಪೋಲಿಸರು ನನಗೆ ಕರೆ ಮಾಡಿ ಅಪಘಾತ ಪಡಿಸಿದ ಲಾರಿ ಸಿಕ್ಕಿದೆ ಎಂದು ಹೇಳಿ ಅದಾದ 5 ದಿನಗಳ ನಂತರ ಅಂದರೆ ದಿ.22.05.2023 ರಂದು ನಾನು ಪೋಲಿಸ್ ಠಾಣೆಗೆ ಹೋದೆ ಅಲ್ಲಿ ಪೋಲಿಸರು ಲಾರಿ ತೋರಿಸಿದರು. ಪೋಲಿಸರು ಚಾಸಾ-8 ರವರ ಸಹಿಯನ್ನು ಪಡೆದಿದ್ದಾರೆ. ಆರೋಪಿಯೇ ಅಪಘಾತಪಡಿಸಿದ್ದಾರೆ ಎಂದು ನಾನು ಪೋಲಿಸರಿಗೆ ಹೇಳಿಲ್ಲ.

ಸಾಕ್ಷಿಯ ದಿ.12.05.2023 ರ ದೂರಿನಲ್ಲಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸುತ್ತಾರೆ. ಸಾಕ್ಷಿಯು ಎರಡು ಪೋಟೊಗಳಲ್ಲಿ ಇರುವ ವಾಹನವನ್ನು ನೋಡಿ ಅಪಘಾತಪಡಿಸಿದ ವಾಹನ ಇದೆ ಎಂದು ಗುರುತಿಸಿ ಸದರಿ ಪೋಟೊವನ್ನು ಸಿಡಿಯೊಂದಿಗೆ ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.12.05.2023 ರಂದು ರಾತ್ರಿ ಸುಮಾರು 12.30 ರಿಂದ 3.30 ರೊಳಗೆ ಆರೋಪಿ KA-21-C-4813 ವಾಹನವನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಬಂದು ಬಣಕಲ್ ಗ್ರಾಮದ ಮತ್ತಿಕಟ್ಟೆ ಸರ್ಕಲ್ ನಲ್ಲಿ ರಸ್ತೆ ದಾಟುತ್ತಿದ್ದ ಮೃತ ಮಂಜುನಾಥ್ ರವರಿಗೆ ಡಿಕ್ಕಿ ಪಡಿಸಿದರು ಎಂದು ನನಗೆ ಗೊತ್ತು ಎಂದರೆ ಸರಿ. ಡಿಕ್ಕಿ ಪಡಿಸಿದ ಪರಿಣಾಮ ಮಂಜುನಾಥ್ ರವರಿಗೆ ತೀವ್ರ ರಕ್ತ ಸ್ರಾವವಾಗಿ ಮೃತಪಟ್ಟರು ಎಂದರೆ ಸರಿ. ಈ ಕುರಿತು ನಾನು ನಿಪಿ-1 ರಂತೆ ದೂರು ದಾಖಲಿಸಿದ್ದೇನೆ ಎಂದರೆ ಸರಿ. ಆನಂತರ ದಿ.22.05.2023 ರಂದು ಮೂಡಿಗೆರೆ ವೃತ್ತ ನಿರೀಕ್ಷಕರ ಕಚೇರಿಗೆ ಬಂದು ಆರೋಪಿ ಹಾಗೂ ವಾಹನವನ್ನು ನೋಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ಮೃತ ಮಂಜುನಾಥ್ ರವರು ಕೂಲಿ ಕೆಲಸಕ್ಕೆ ಜನರನ್ನು ಬಿಡುವ ಕೆಲಸ ಮಾಡುತ್ತಿದ್ದರು. ಸಾಮಾನ್ಯವಾಗಿ ತೋಟದ ಕೆಲಸ ಸ.6.00 ರೊಳಗೆ ಮುಗಿಯುತ್ತದೆ ಎಂದರೆ ಸರಿ. ಮೃತ ಮಂಜುನಾಥ್ ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ರಾ.12.00 ರ ಸಮಯಕ್ಕೆ ಮಂಜುನಾಥ್ ರವರು ಎಲ್ಲಿ ಯಾವ ವಿಚಾರಕ್ಕೆ ಹೋಗಿದ್ದರು ಎಂದು ನನಗೆ ಮಾಹಿತಿ ಇಲ್ಲ. ಚಾಸಾ-8 ರವರ ಮೊಬೈಲ್ ನಂಬರ್ ನ್ನು ಈಗ ಹೇಳಲು ಆಗುವುದಿಲ್ಲ. ಚಾಸಾ-8 ರವರು ವಿಚಾರ ತಿಳಿಸಿದಾಗ ಬೆ.9.00 ಗಂಟೆಯಾಗಿತ್ತು. ಆ ಸಮಯಕ್ಕೆ 5-10 ನಿಮಿಷಗಳ ಕಾಲ ಎರಡು ಮೂರು ಬಾರಿ ಮಾತನಾಡಿದ್ದೆ. ನಾನು ಠಾಣೆಯಲ್ಲಿ ಖಾಲಿ ಹಾಳೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೃತ ದೇಹವನ್ನು ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದ್ದರು. ಆಗ ಸಮಯ ಸ.5.00 ರ ನಂತರವಾಗಿತ್ತು. ಮೃತ ದೇಹವನ್ನು ನೋಡುವಾಗ ಸಂಜೆ ಸುಮಾರು 6.30 ಆಗಿರಬಹುದು. ಆ ಸಮಯಕ್ಕೆ ನಾನೊಬ್ಬನೆ ಇದ್ದೆ.

ಮಂಜುನಾಥ್ ರವರಿಗೆ ಡಿಕ್ಕಿ ಪಡಿಸಿದ ವಾಹನವನ್ನು ನಾನು ಕಣ್ಣಾರೆ ನೋಡಿಲ್ಲ. ನ್ಯಾಯಾಲಯದ ಮುಂದಿವರು ಆರೋಪಿಯೇ ಅಪಘಾತ ಪಡಿಸಿದರ ಬಗ್ಗೆ ನಿಮಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ವಾಹನದ ಡ್ರೈವರ್ ನ ಹೆಸರನ್ನು ಪೋಲಿಸರು ಹೇಳಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ ಅಪಘಾತ ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ನೋಡಿದ ಲಾರಿ 4 ಚಕ್ರದ್ದ ಎಂದರೆ ಸಾಕ್ಷಿಯು ಚಕ್ರಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಲಾರಿಯ ಮುಂಭಾಗ ಹಾಗೂ ಎರಡು ದಿಕ್ಕುಗಳಲ್ಲಿ ಯಾವ ಹೆಸರು ಇತ್ತು ಎಂದು ನಾನು ನೋಡಿಲ್ಲ. ಆ ಲಾರಿ ಹಳದಿ ಮತ್ತು ಕೆಂಪು ಮಿಶ್ರಿತ ಬಣ್ಣದ್ದಾಗಿತ್ತು. ದೂರನ್ನು ನಾನು ಸ್ವತಃ ಬರೆದಿದ್ದೆ. ನಿಪಿ-1 ನ್ನು ಟೈಪ್ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ನಾನು ಹೇಳಿದ್ದನ್ನು ಟೈಪ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದೂರು ಕೊಡುವಾಗ ನಾನೊಬ್ಬನೇ ಇದ್ದೆ. ನನಗೆ ಬೇರೆಯವರಿಂದ ಬಂದ ಮಾಹಿತಿಯನ್ನು ಹೊರತುಪಡಿಸಿ ಅಪಘಾತದ ಬಗ್ಗೆ ಖುದ್ದು ಮಾಹಿತಿ ಇಲ್ಲ.

ವೃತ್ತ ನಿರೀಕ್ಷಕರ ಕಚೇರಿಗೆ ದಿ.22.05.2023 ರಂದು ಹೋಗಿದ್ದೆ. ಆ ದಿನ ಮೃತ ಮಂಜುನಾಥ್ ರವರ ಮಕ್ಕಳು, ಪತ್ನಿ, ತಂದೆತಾಯಿ ಮತ್ತು ತಂಗಿಯೊಂದಿಗೆ ಹೋಗಿದ್ದೆ. ಅಲ್ಲಿ ಪೋಲಿಸರು ಬರೆದಿಟ್ಟಿದ್ದ ದಾಖಲೆಗಳಿಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ಬರವಣಿಗೆಗಳನ್ನು ಪೋಲಸರು ಓದಿ ಹೇಳಿದ್ದಕ್ಕೆ ನಾವು ಸಹಿ ಮಾಡಿದ್ದೇವೆ ಎಂದರೆ ಸರಿ. ಆ ಬರವಣಿಗೆಗಳನ್ನು ನಾನು ಪರಿಶೀಲಿಸಿ ನೋಡಿದ್ದೆ. ಆ ರೀತಿ ಓದಲು ಅರ್ಧ ಮುಕ್ಕಾಲು ಗಂಟೆ ಸಮಯವಾಯಿತು. ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನಾಲ್ಕು ಗಂಟೆಗಳ ಕಾಲ ಇದ್ದೆವು. ಆ ಕಚೇರಿಯಿಂದ ಹೊರ ಬರುವಾಗ ರಾ.9.00 ಗಂಟೆಯಾಗಿತ್ತು. ಮಂಜುನಾಥ್ ರವರು ನನ್ನ ತಮ್ಮನಾದ ಕಾರಣ ಅವರ ಸಾವಿನ ಸಂಬಂಧ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಸಂಬಂಧ ಇಲ್ಲದೇ ಇದ್ದರೂ ಅವರಿಂದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖಾಲಿ ಹಾಳೆಗಳಿಗೆ ಸಹಿ ಮಾಡಿ ಪೋಲಿಸರು ಹೇಳಿದ ಹಾಗೇ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಂಜುನಾಥ್ ರವರು ಕುಡಿದು ಬೇರೆ ವಾಹನದಿಂದ ಅಪಘಾತಪಡಿಸಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.